ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಮಣ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ನಟರಾಜನ್

ರಿಚರ್ಡ್ ವಿನ್ಸೆಂಟ್ ' ಡಿ'ಸೋಜ ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು

ರಿಟ್ ಅರ್ಜಿಸಂಖ್ಯೆ: 15915/2013, ದಿನಾಂಕ 17 ನೇ ಡಿಸೆಂಬರ್, 2018.

ಆಜ್ಞೆ

ನ್ಯಾಯಮೂರ್ತಿ ಶ್ರೀ ರವಿ ಮಳಮಠ:

ಅರ್ಜಿದಾರರ ವಾದವು ಸಂಕ್ಷಿಪ್ತವಾಗಿ ಈ ಮುಂದಿನಂತಿದೆ:

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಭಾರತೀಯ ಆಡಳಿತ ಸೇವೆ (ಭಾ. ಆ.ಸೇ. )ಗೆ ಆಯ್ಕೆಗಾಗಿ ಎಲ್ಲಾ ಆಡಳಿತ ಇಲಾಖೆಗಳಿಂದ ರಾಜ್ಯ ಸಿವಿಲ್ ಸೇವೆಯೇತರ ಅಧಿಕಾರಿಗಳ (ಇಲ್ಲಿಂದ ಮುಂದೆ ' ಎಸ್ಸಿಎಸ್ ಅಧಿಕಾರಿಗಳು ಎಂದು ಉಲ್ಲೇಖಿಸಲಾಗುವುದು) ಹೆಸರುಗಳನ್ನು ಶಿಫಾರಸ್ಸು ಮಾಡುವುದಕ್ಕಾಗಿ ಬೇರೆ ಬೇರೆ ಆಡಳಿತ ಇಲಾಖೆಗಳ ಕಾರ್ಯದರ್ಶಿಗಳಿಗೆದಿನಾಂಕ: 23.4.2010 ರಂದು ಒಂದು ಪತ್ರವನ್ನು ಕಳುಹಿಸಿದರು. ಎಸ್ಸಿಎಸ್ ಅಧಿಕಾರಿಗಳು ಅಗತ್ಯಪಡಿಸಿದ 88 ರಿಚರ್ಡ್ ವಿನ್ಸೆಂಟ್ ' ಡಿ'ಸೋಜ -ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು 869 ಅರ್ಹತೆಗಳನುಸಾರ, ಅಸಾಧಾರಣ ಅರ್ಹತೆ ಮತ್ತು ಸಾಮರ್ಥ್ಯ ಹೊಂದಿರಬೇಕು ಎಂಬುದು ನಿಯಮಾನುಸಾರ ಷರತ್ತುಗಳಾಗಿದ್ದವು.ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಡಿಯಲ್ಲಿ ಶೋಧನಾ ಸಮಿತಿಯು ಹದಿಮೂರು ವಿಭಿನ್ನ ಇಲಾಖೆಗಳಿಂದ ಮೂವತ್ತಾರು ಹೆಸರುಗಳನ್ನು ಸ್ವೀಕರಿಸಿರುತ್ತದೆ.ಅಲ್ಲಿ ಮೂರು ಖಾಲಿ ಹುದ್ದೆಗಳಿದ್ದವು.ಆದ್ದರಿಂದ, ಸಮಿತಿಯು ಹದಿನೈದು ಅಧಿಕಾರಿಗಳನ್ನು ಅಂತಿಮ ಆಯ್ಕೆಪಟ್ಟಿಗೆ ಸೇರಿಸಿ, ಅವರ ಹೆಸರುಗಳನ್ನು ಪರಿಗಣನೆಗೆ ಕಳುಹಿಸಿರುತ್ತದೆ.ಕೇಂದ್ರ ಆಡಳಿತ ನ್ಯಾಯಾಧಿಕರಣ, ಬೆಂಗಳೂರಿನಿಂದ 2010 ರ ಸಂಕೀರ್ಣ ಅರ್ಜಿಸಂಖ್ಯೆ: 511 ರಲ್ಲಿ 22.12.2010 ರಂದು ಜಾರಿಗೊಳಿಸಲಾದ ಆದೇಶದ ಪ್ರಕಾರ ಮತ್ತೊಬ್ಬ ಅಧಿಕಾರಿಯನ್ನು ಪಟ್ಟಿಗೆ ಸೇರಿಸಲಾಯಿತು.ತರುವಾಯ, 2010 ರ ಮೂಲ ಅರ್ಜಿಸಂಖ್ಯೆ: 399 ರಲ್ಲಿ ಕೇಂದ್ರ ಆಡಳಿತ ನ್ಯಾಯಾಧಿಕರಣದಿಂದದಿನಾಂಕ: 8.11.2010 ರಂದು ಹೊರಡಿಸಲಾದ ಆದೇಶದ ಪ್ರಕಾರ ಮತ್ತೊಬ್ಬ ಅಧಿಕಾರಿಯನ್ನು ಪಟ್ಟಿಗೆ ಸೇರಿಸಲಾಯಿತು.ತದನಂತರ, ಅದನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ಸರ್ಕಾರವು ಹದಿನೇಳು ಅಭ್ಯರ್ಥಿಗಳ ಪಟ್ಟಿಯನ್ನು ಕೇಂದ್ರ ಲೋಕ ಸೇವಾ ಆಯೋಗಕ್ಕೆ ಕಳುಹಿಸಿರುತ್ತದೆ.ಭಾರತೀಯ ಆಡಳಿತ ಸೇವಾ (ಆಯ್ಕೆಯ ಮೂಲಕ ನಿಯುಕ್ತಿ) ವಿನಿಯಮಗಳು, 1997 ರಡಿಯಲ್ಲಿ ಭಾ.ಆ.ಸೇ.ಗೆ ಆಯ್ಕೆಗಾಗಿ ತಮ್ಮ ಹೆಸರುಗಳನ್ನು ಪ್ರಸ್ತಾಪಿಸಲಾಗಿದೆ ಎಂದು ರಾಜ್ಯ ಸರ್ಕಾರದಿಂದ ಎಲ್ಲಾ ಹದಿನೇಳು ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿರುತ್ತದೆ.ಸಂಬಂಧಿತ ಅಧಿಕಾರಿಗಳುದಿನಾಂಕ: 28.12.2010 ರಂದು ಆಯ್ಕೆ ಸಮಿತಿಯ ಮುಂದೆ ಸಂದರ್ಶನಕ್ಕೆ ಹಾಜರಾಗಬೇಕಾಗಿತ್ತು.ಅವರಲ್ಲಿ ಮೂವರು ಆಯ್ಕೆಯಾದರು, ಆದರೆ ಪಟ್ಟಿಯಲ್ಲಿದ್ದ ಕ್ರಮಸಂಖ್ಯೆ: 1 ಮತ್ತು 2 ರ ಅರ್ಜಿದಾರರು ಆಯ್ಕೆಯಾಗಲಿಲ್ಲ.ಅರ್ಜಿದಾರರು, ಇತರ ಅಭ್ಯರ್ಥಿಗಳ ಆಯ್ಕೆ ಹಾಗೂ ಅರ್ಜಿದಾರರ ಆಯ್ಕೆಯಾಗದಿರುವಿಕೆಯನ್ನು ಪ್ರಶ್ನಿಸಿ ಬೆಂಗಳೂರಿನ ಕೇಂದ್ರ ಆಡಳಿತ ನ್ಯಾಯಾಧಿಕರಣದ ಮುಂದೆ 2011 ರ ಮೂಲ ಅರ್ಜಿಸಂಖ್ಯೆ: 46 ಹಾಗೂ 47 ನ್ನು

ಸಲ್ಲಿಸಿರುತ್ತಾರೆ.ಅದಕ್ಕೆ ಪ್ರತಿಯಾಗಿ, ಪ್ರಶ್ನಿತ ಆದೇಶದ ಮೂಲಕ ನ್ಯಾಯಾಧಿಕರಣವು ಅರ್ಜಿಗಳನ್ನು ವಜಾಗೊಳಿಸಿರುತ್ತದೆ.204 ರ ಮೂಲ ಅರ್ಜಿಸಂಖ್ಯೆ: 47 ರಲ್ಲಿ ಅರ್ಜಿಯ ತಿರಸ್ಕರಣೆಯಿಂದ ಬಾಧಿತನಾಗಿ ಅರ್ಜಿದಾರರು, ಈ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.2011 ರ ಮೂಲ ಅರ್ಜಿಯಲ್ಲಿದ್ದ ಮತ್ತೋರ್ವ ಅರ್ಜಿದಾರರು ಇದನ್ನು ಪ್ರಶ್ನಿಸಿರುವುದಿಲ್ಲ.

2. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ನ್ಯಾಯವಾದಿಗಳಾದ ಶ್ರೀ ಎಸ್.ಎಸ್. ರಾಮ್ದಾಸ್ ಅವರು, ನ್ಯಾಯಾಧಿಕರಣದ ಆದೇಶವು ದೋಷಪೂರ್ಣವಾಗಿದ್ದು, ಮಧ್ಯಪ್ರವೇಶಕ್ಕೆ ಯೋಗ್ಯವಾಗಿದೆ ಎಂದು ವಾದಿಸಿದ್ದಾರೆ.ಇದಲ್ಲದೆ, ಇಡೀ ಆಯ್ಕೆ ಪ್ರಕ್ರಿಯೆ ದೋಷಪೂರ್ಣವಾಗಿದೆ ಶೇ .50 ಮಾನ್ಯತೆ ಅಥವಾ ಅಭ್ಯರ್ಥಿಗಳ ಸಂದರ್ಶನದಲ್ಲಿ 50 ಅಂಕಗಳು ಅಸಮರ್ಪಕವಾಗಿದೆ, ದಾಖಲೆಯಲ್ಲಿರುವ ಸಂಗತಿಯು ಅರ್ಜಿದಾರನು ಕಳೆದ ಐದು ವರ್ಷಗಳಿಂದ ಉತ್ಕೃಷ್ಟ ಶ್ರೇಣಿ ದಾಖಲೆಯನ್ನು ಪಡೆದಿದ್ದಾನೆ ಎಂದು ಸೂಚಿಸುತ್ತದೆ; ಆದರೆ ಆಯ್ಕೆಯಾದ ಇಬ್ಬರು ಅಭ್ಯರ್ಥಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿ (ಸಂಕ್ಷಿಪ್ತವಾಗಿ ' ಎಸಿಆರ್) ಯಲ್ಲಿ ಕಂಡುಬರುವಂತೆ, ಯಾವುದೇ ಉತ್ಕೃಷ್ಟ ಶ್ರೇಣಿ ದಾಖಲೆಯನ್ನು ಹೊಂದಿಲ್ಲ ಎಂದು ವಾದಿಸುತ್ತಾರೆ.ಇಬ್ಬರೂ ಕಳೆದ ಒಂದು ಅಥವಾ ಎರಡು ವರ್ಷಗಳಿಂದ ಬಹಳ ಉತ್ತಮ ಅಂಕಗಳನ್ನು ಪಡೆದಿರುತ್ತಾರೆ.ಆದ್ದರಿಂದ, ಅವರನ್ನು ಅವರನ್ನು ಈ ಈ ಅರ್ಜಿದಾರನಿಗಿಂತ ಅರ್ಜಿದಾರನಿಗಿಂತ ಹೆಚ್ಚು ಯೋಗ್ಯತೆಯನ್ನು ಹೊಂದಿರುವುದಾಗಿ ಪರಿಗಣಿಸುವುದು ಎಂದಿಗೂ ಸಾಧ್ಯವಿಲ್ಲ.ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಿಗೆ ಸೂಕ್ತ ಮಾನ್ಯತೆ ನೀಡಲಾಗಿಲ್ಲ ಎಂದು ವಾದಿಸಲಾಗಿದೆ.

3. ಪ್ರತ್ಯರ್ಜಿದಾರಸಂಖ್ಯೆ: 12 ಪರ ಹಾಜರಾಗಿರುವ ಮಾನ್ಯ ಹಿರಿಯ ನ್ಯಾಯವಾದಿಗಳಾದ ಶ್ರೀ ಪಿ.ಎಸ್. ರಾಜಗೋಪಾಲ್, ಪ್ರಶ್ನಿತ ಆದೇಶವನ್ನು ಸಮರ್ಥಿಸಿಕೊಂಡಿದ್ದು.ಅವರು ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ದೋಷ ಕಂಡು ಬರುತ್ತಿಲ್ಲ ಎಂದು ವಾದಿಸಿದ್ದು, ಅಭ್ಯರ್ಥಿಗಳನ್ನು ಸಂದರ್ಶನದ ಹಂತದಲ್ಲಿ ಶೇ .50 ಮಾನ್ಯತೆಯ ಅಥವಾ 50 ಅಂಕಗಳ ಆಧಾರದಲ್ಲಿ ಆಯ್ಕೆ ಮಾಡುವ ಪ್ರಶ್ನೆ 1962 ರಿಂದ ಚಾಲ್ತಿಯಲ್ಲಿದ್ದುದ್ದರಿಂದ, ಇಲ್ಲಿನ ಅರ್ಜಿದಾರನು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದುಕೊಂಡು ಈ ಹಂತದಲ್ಲಿ ಅದರಲ್ಲಿ ದೋಷ ಕಂಡು ಹಿಡಿಯುವಂತಿಲ್ಲ ಎಂದು ವಾದಿಸುತ್ತಾರೆ.ಆಯ್ಕೆಗೆ ಸಂಬಂಧಪಟ್ಟಂತೆ, ಅದು ಆಯ್ಕೆ ಸಮಿತಿಯ ವಿವೇಚನೆಯನ್ನು ಅವಲಂಬಿಸಿರುತ್ತದೆ ಹಾಗೂ ಯಾವುದೇ ಕಾನೂನು ನ್ಯಾಯಾಲಯದ ಮುಂದೆ ಅದನ್ನು ಪ್ರಶ್ನಿಸುವಂತಿರುವುದಿಲ್ಲ.ಆದ್ದರಿಂದ, ಅವರು ಅರ್ಜಿಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

4. ಪ್ರತ್ಯರ್ಜಿದಾರಸಂಖ್ಯೆ: 2 ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿ. ನರಸಿಂಹ ಹೊಳ್ಳ ಅವರು, ಕೇಂದ್ರ ಲೋಕ ಸೇವಾ ಆಯೋಗದ ಆಯ್ಕೆ ಪ್ರಕ್ರಿಯೆಯನ್ನು ಸಮರ್ಥಿಸಿಕೊಂಡಿದ್ದಾರೆ.ಅವರು ಆಯ್ಕೆ ಸಮಿತಿಯ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಗಣಿಸಿರುವುದಷ್ಟೇ ಅಲ್ಲದೆ, ಅವುಗಳನ್ನು ಪುನರ್ನಿರ್ಧರಣೆ ಮಾಡಲು ಕರ್ತವ್ಯಬದ್ಧವಾಗಿದೆ ಹಾಗೂ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಪುನರ್ ನಿರ್ಧರಣೆಯ ಪ್ರಕ್ರಿಯೆಯಲ್ಲಿ, ಅವರು ಒಬ್ಬ ನಿರ್ದಿಷ್ಟ ಅಭ್ಯರ್ಥಿಯನ್ನು ನಿಗದಿಗೊಳಿಸಿದ ಕಾರಣಗಳ ಆಧಾರದಲ್ಲಿ ಮೇಲಿನ ಹಂತಕ್ಕೆ ಏರಿಸಲು ಅಥವಾ ಕೆಳಹಂತಕ್ಕೆ ಇಳಿಸಲು ಹಕ್ಕುಳ್ಳವರಾಗಿರುತ್ತಾರೆ ಎಂದು ವಾದಿಸುತ್ತಾರೆ.ಸಂದರ್ಶನದಲ್ಲಿ ಶೇ. 50 ರಷ್ಟು ಮಾನ್ಯತೆ ಅಥವಾ 50 ಅಂಕಗಳು ಆಯ್ಕೆಯ ಒಂದು ಪ್ರಕ್ರಿಯೆಯಾಗಿದೆ ಎಂದೂ ವಾದಿಸುತ್ತಾರೆ.ಸಂದರ್ಶನದಲ್ಲಿ ಶೇ .50 ಮಾನ್ಯತೆ ಅಥವಾ 50 ಅಂಕಗಳನ್ನು

ನೀಡುವುದು 1997 ರಿಂದಲೂ ಚಾಲ್ತಿಯಲ್ಲಿರುವ ವಿಧಾನವಾಗಿದ್ದು, ಆದ್ದರಿಂದ, ಅಂತಹ ಆಧಾರವು ಪರಿಗಣನೆಗೆ ಉದ್ಭವಿಸುವುದಿಲ್ಲ.

5. ಪ್ರತ್ಯರ್ಜಿದಾರಸಂಖ್ಯೆ: 1 ಪರವಾಗಿ ಹಾಜರಾಗಿರುವ ಮಾನ್ಯ ಕೇಂದ್ರ ಸರ್ಕಾರದ ನ್ಯಾಯವಾದಿಗಳಾದ ಶ್ರೀಮತಿ ಮಂಜುಳಾ ಆರ್. ಕಮದಳ್ಳಿ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

6. ಪ್ರತ್ಯರ್ಜಿದಾರಸಂಖ್ಯೆ: 3 ಪರವಾಗಿ ಹಾಜರಾಗಿರುವ ಮಾನ್ಯ ಹೆಚ್ಚುವರಿ ಸರ್ಕಾರೀ ವಕೀಲರಾದ, ಶ್ರೀ ಐ. ತಾರಾನಾಥ್ ಪೂಜಾರಿ ಅವರು ಇದೇ ವಾದಗಳನ್ನು ಅನುಮೋದಿಸಿದ್ದಾರೆ.

7. ಪ್ರತ್ಯರ್ಜಿದಾರಸಂಖ್ಯೆ: 5 ಮತ್ತು 13 ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳಾದ ಶ್ರೀ ಮಹೇಶ್ ಬಿ. ಅವರು ಪ್ರತ್ಯರ್ಜಿದಾರಸಂಖ್ಯೆ: 12 ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಅನುಮೋದಿಸಿದ್ದಾರೆ.

8. ಆಯಾ ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಗಿದೆ.

9. ಅರ್ಜಿದಾರನ ಪರ ನ್ಯಾಯವಾದಿಗಳು ಒತ್ತು ನೀಡಿ ಹೇಳಿದ ಮೊದಲ ವಾದವು ಪರಿಗಣನೆಗೆ ಕಳುಹಿಸಲಾದ ಅಧಿಕಾರಿಗಳ ಸಂಖ್ಯೆಗೆ ಸಂಬಂಧಿಸಿದ್ದಾಗಿದೆ.ಲಭ್ಯವಿದ್ದ ಖಾಲಿ ಹುದ್ದೆಗಳ ಸಂಖ್ಯೆಯು ಮೂರು ಆಗಿತ್ತು ಎಂದು ವಾದಿಸಲಾಗಿದೆ.ಆದ್ದರಿಂದ, ಪರಿಗಣನೆಗೆ ಕೇವಲ ಹದಿನೈದು ಅಧಿಕಾರಿಗಳನ್ನು ಮಾತ್ರ ಕಳುಹಿಸಲು ಸಾಧ್ಯವಿತ್ತು.ಇನ್ನೊಂದು ಕಡೆಯಲ್ಲಿ, ಪ್ರತ್ಯರ್ಜಿದಾರರು ಸುಮಾರು ಮುವತ್ತಾರು ವ್ಯಕ್ತಿಗಳಿರುವ ವಾದವನ್ನು ಪರಿಗಣಿಸಿದ್ದಾರೆ.ಆದ್ದರಿಂದ, ಅಲ್ಲೊಂದು ನಿಯಮ ಭ ಂ ಗವಾಗಿದೆ.

9 (ಎ), ನಾವು ವಾದವನ್ನು ಸ್ವೀಕರಿಸಲು ಸಾಧ್ಯವಿಲ್ಲ.ಶೋಧನಾ ಸಮಿತಿಯು ಮುಂಬಡ್ತಿಗೆ ಹಕ್ಕುದಾರರಾಗಿರುವ ಎಲ್ಲಾ ಅರ್ಹ ಅಭ್ಯರ್ಥಿಗಳ ವಿಷಯವನ್ನು ಪರಿಗಣಿಸಲು ಹಕ್ಕುಳ್ಳದ್ದಾಗಿದೆ.ಹಾಗೆ ಮಾಡುವ ಪ್ರಕ್ರಿಯೆಯಲ್ಲಿ, ಅದು ಲಭ್ಯವಿರುವ ಹುದ್ದೆಗಳಿಗೆ ತನ್ನನ್ನು ತಾನು ನಿರ್ಬಂಧಗೊಳಿಸಲಾಗದು.ಆದ್ದರಿಂದ, ನೇಮಕಾತಿಗೆ ಅರ್ಹರಾಗಬಲ್ಲ ವ್ಯಕ್ತಿಗಳ ಹೆಸರುಗಳು ಹಾಗೂ ದಾಖಲೆಗಳನ್ನು ಕಳುಹಿಸುವಂತೆ ಎಲ್ಲಾ ಇಲಾಖೆಗಳಿಗೆ ಒಂದು ಮನವಿಯನ್ನು ಕಳುಹಿಸಲಾಯಿತು.ಎಲ್ಲಾ ಅಧಿಕಾರಿಗಳ ಹೆಸರುಗಳನ್ನು ಪರಿಗಣಿಸಿದ ಬಳಿಕ, ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಅತ್ಯಂತ ಹೆಚ್ಚು ಯೋಗ್ಯತೆ ಹೊಂದಿದವರನ್ನು ಹದಿನೈದು ವ್ಯಕ್ತಿಗಳಿಗೆ ಮಿತಿಗೊಳಿಸಿ, ಬಳಿಕ ಆಯ್ಕೆ ಸಮಿತಿಗೆ ಕಳುಹಿಸಲಾಯಿತು.ಆದ್ದರಿಂದ, ಮೂರು ಹುದ್ದೆಗಳಿದ್ದ ಕಾರಣ, ಆಯ್ಕೆ ಸಮಿತಿಗೆ ಕಳುಹಿಸಲಾದದ್ದು ಲಭ್ಯವಿರುವ ಹುದ್ದೆಗಳ ಸಂಖ್ಯೆಗಿಂತ ಕೇವಲ ಐದರಷ್ಟಾಗಿತ್ತು.ಆದ್ದರಿಂದ, ಹದಿನೈದು ಹೆಸರುಗಳನ್ನು ಕಳುಹಿಸಲಾಯಿತು.ಹೆಚ್ಚುವರಿಯಾಗಿ, ಈ ಮೇಲೆ ಉಲ್ಲೇಖಿಸಲಾದ ವಿಷಯಗಳಲ್ಲಿ ಕೇಂದ್ರ ಆಡಳಿತ ನ್ಯಾಯಾಧಿಕರಣದಿಂದ ಹೊರಡಿಸಲಾದ ಮಧ್ಯಕಾಲೀನ ಆದೇಶದ ಪ್ರಕಾರ ಎರಡು ಹೆಸರುಗಳನ್ನು ಸೇರಿಸಿ ಆಯ್ಕೆ ಸಮಿತಿಗೆ ಕಳುಹಿಸಲಾಯಿತು.ಈ ಸಂದರ್ಭಗಳ ಅಡಿಯಲ್ಲಿ, ಶೋಧನಾ ಸಮಿತಿಯ ಕಾರ್ಯವು ಕಾನೂನಿಗೆ ವಿರುದ್ಧವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಅವರು ಕಾನೂನಿನಲ್ಲಿ ಮುಂಬಡ್ತಿಗೆ ಹಕ್ಕುಳ್ಳ ಎಷ್ಟು 92 ರಿಚರ್ಡ್ ವಿನ್ಸೆಂಟ್ ' ಡಿ'ಸೋಜ -ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು ಜನರನ್ನು ಬೇಕಾದರೂ ಪರಿಶೋಧಿಸಲು ಹಕ್ಕುಳ್ಳವರಾಗಿರುತ್ತಾರೆ.ಪರಿಶೋಧನೆ ಪೂರ್ಣವಾದ ಬಳಿಕ, ಅವರು ಹದಿನೈದು ವ್ಯಕ್ತಿಗಳ ಹೆಸರುಗಳನ್ನು ಕಳುಹಿಸಲು ಹಕ್ಕುಳ್ಳವರಾಗಿರುತ್ತಾರೆ.ಅವರು ಅಂತೆಯೇ

ಮಾಡಿರುತ್ತಾರೆ.ಆದ್ದರಿಂದ, ನಮಗೆ ಯಾವುದೇ ನಿಯಮ ಭಂಗ ಕಂಡುಬರುತ್ತಿಲ್ಲ.ಆದ್ದರಿಂದ, ಅಂತಹ ವಾದವನ್ನು ಸ್ವೀಕರಿಸಲಾಗುವುದಿಲ್ಲ.

10. ಅರ್ಜಿದಾರನ ಪರ ನ್ಯಾಯವಾದಿಗಳಿಂದ ಸಂದರ್ಶನದ ಉದ್ದೇಶಕ್ಕಾಗಿ ಶೇ .50 ರಷ್ಟು ಪ್ರಮಾಣದ ಅಂಕಗಳು ಅಥವಾ 50 ಅಂಕಗಳನ್ನು ನೀಡಲಾಗಿದೆ ಎಂದು ಒತ್ತಿ ಹೇಳಲ್ಪಟ್ಟ ಎರಡನೇ ಆಧಾರಾಂಶವು ಸರಿಯಾಗಿರುವುದಿಲ್ಲ.ಅಂಕಗಳನ್ನು ನಿಗದಿಪಡಿಸಬೇಕಾದ ರೀತಿಯು ಭಾರತೀಯ ಆಡಳಿತ ಸೇವಾ (ಆಯ್ಕೆಯ ನಿಯುಕ್ತಿ) ವಿನಿಯಮಗಳು, 1997 ರಿಂದ ನಿಯಂತ್ರಿಸಲ್ಪಡುತ್ತದೆ.ಆಯ್ಕೆ ಪ್ರಕ್ರಿಯೆ ಖಂಡ ಬಿ .1 ಹಾಗೂ ಬಿ .2 ಗಳು, ಭಾ.ಆ.ಸೇ.ಗೆ ನೇಮಕಾತಿಗಾಗಿ ರಾಜ್ಯ ಸರ್ಕಾರೇತರ ಸಿವಿಲ್ ಸೇವಾ ಅಧಿಕಾರಿಗಳ ಆಯ್ಕೆಗಾಗಿ ಆಯ್ಕೆ ಸಮಿತಿಯು ಈ ಮುಂದಿನಂತೆ ಸೇವಾ ದಾಖಲೆಗಳ ಮೌಲ್ಯಮಾಪನ ಹಾಗೂ ವೈಯಕ್ತಿಕ ಸಂದರ್ಶನಗಳ ನಡುವೆ ಅಂಕಗಳನ್ನು ಹಂಚತಕ್ಕದ್ದು ಎಂದು ಸೂಚಿಸುತ್ತವೆ:

I.ಗರಿಷ್ಠ 100 ಅಂಕಗಳಲ್ಲಿ, ಎರಡು ಅಂಶಗಳಲ್ಲಿ ಪ್ರತಿಯೊಂದಕ್ಕೂ ಅಂಕಪ್ರಮಾಣವನ್ನು ಈ ಮುಂದಿನಂತೆ ನೀಡುವುದು:

| | |
|---|---|
| (i) ಈ ಮೊದಲಿನ ಐದು ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿದ ಸೇವಾ ದಾಖಲೆಗಳು | ಶೇಕಡಾ 50 ರಷ್ಟು ಪ್ರಮಾಣದ ಅಂಕಗಳು ಅಥವಾ 50 ಅಂಕಗಳು . |
| 1 ) ವೈಯಕ್ತಿಕ ಸಂದರ್ಶನ | ಶೇಕಡಾ 50 ರಷ್ಟು ಪ್ರಮಾಣದ ಅಂಕಗಳು ಅಥವಾ 50 ಅಂಕಗಳು . |
| ಒಟ್ಟು | 100 ಅಂಕಗಳು . |

II.ಸ್ವವಿವರಕ್ಕಾಗಿ ಪ್ರತ್ಯೇಕ ಅಂಕಗಳನ್ನು ನಿಗದಿಗೊಳಿಸುವ ಅಗತ್ಯವಿಲ್ಲ.ಆದಾಗ್ಯೂ, ಸ್ವವಿವರವನ್ನು ಸಂದರ್ಶನದ ಸಮಯದಲ್ಲಿ ಅಭ್ಯರ್ಥಿಯ ಸಮಗ್ರ ವ್ಯಕ್ತಿತ್ವವನ್ನು ಮೌಲ್ಯಮಾಪನ ಮಾಡುವಾಗ ಪರಿಗಣನೆಯಲ್ಲಿಡಬಹುದು.

(ದಿನಾಂಕ: 8 ನೇ ಜನವರಿ, 1999 ರ ಆಯೋಗದ ನಿರ್ಣಯವನ್ನು ನೋಡಿ)

ಬಿ .2 ಅರ್ಹ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಿಗೆ ಅಂಕಗಳನ್ನು ನಿಗದಿಗೊಳಿಸುವಾಗ, ದಾಖಲೆಗಳ ಮೌಲ್ಯಮಾಪನಕ್ಕಾಗಿ ಮುಂಬಡ್ತಿ ವಿನಿಯಮಗಳಿಗೆ ವಿಸ್ತಾರವಾದ ಮಾರ್ಗದರ್ಶಕ ಸೂತ್ರಗಳನ್ನು ಅನುಸರಿಸಬಹುದು.ವೈಯಕ್ತಿಕ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಮೌಲ್ಯಮಾಪನದ ಆಧಾರದ ಮೇರೆಗೆ, ಸಮಿತಿಯು 10 ಅಂಕಗಳನ್ನು ' ಉತ್ಕೃಷ್ಟ ಸಾಧನೆಗಾಗಿ, 8 ಅಂಕಗಳನ್ನು " ಅತ್ಯುತ್ತಮ ಸಾಧನೆಗಾಗಿ ಹಾಗೂ 6 ಅಂಕಗಳನ್ನು ' ಉತ್ತಮ ' ಸಾಧನೆಗಾಗಿ ಮೌಲ್ಯಮಾಪನದ ವೈಯಕ್ತಿಕ ವರ್ಷದ (ಗಳಲ್ಲಿ ಶ್ರೇಣೀಕರಿಸಿ ನಿಗದಿಗೊಳಿಸಬಹುದಾಗಿದೆ.

10 (ಎ).ಆದ್ದರಿಂದ, ಶೇಕಡ 50 ಅಂಕಗಳನ್ನು ಕಾರ್ಯನಿರ್ವಹಣಾ ವರದಿಗಳ (ಸಂಕ್ಷಿಪ್ತವಾಗಿ ಸಿ.ಆರ್.ಗಳು) ಆಧಾರದಲ್ಲಿ ನಿಗದಿಗೊಳಿಸಲಾಗಿದೆ ಎಂದು ವಾದಿಸಲಾಗಿದೆ.ಸಂದರ್ಶನದ ಉದ್ದೇಶಕ್ಕಾಗಿ ಶೇಕಡ 50 ರಷ್ಟು ಅಂಕಗಳ ಹಂಚುವಿಕೆಯು ಅಪೇಕ್ಷಿತ ಫಲಿತಾಂಶದತ್ತ ಮುನ್ನಡೆಸಲಾರದು.ಅಭ್ಯರ್ಥಿಗಳ ಸೂಕ್ತತೆಯು ಅವರು ಉತ್ಕೃಷ್ಟ ಮಟ್ಟದ ಯೋಗ್ಯತೆ ಹಾಗೂ ಸಾಮರ್ಥ್ಯವನ್ನು ಹೊಂದಿರುವುದರ ಮೇಲೆ ನಿರ್ಧರಿಸಲ್ಪಡಬೇಕು.ಆದ್ದರಿಂದ, ಸಂದರ್ಶನಕ್ಕೆ ಶೇ .50 ಅಂಕಗಳ ಮಂಜೂರಾತಿಯು ನ್ಯಾಯಸಮ್ಮತವಾಗಿರುವುದಿಲ್ಲ.ಅವರ ವಾದದ ಬೆಂಬಲದಲ್ಲಿ, ಅವರು ಮುಂದಿನ ತೀರ್ಪುಗಳನ್ನು ಅವಲಂಬಿಸಿರುತ್ತಾರೆ:

- ಅಶೋಕ್ ಕುಮಾರ್ ಯಾದವ್ -ವಿರುದ್ಧ ಹರಿಯಾಣ ರಾಜ್ಯ ಸರ್ಕಾರ (1985) 4 ಎಸ್ಸಿ 417
- ಮೊಹಿಂದರ್ ಸೇನ್ ಗರ್ಗ್ ವಿರುದ್ಧ ಪಂಜಾಬ್ ರಾಜ್ಯ ಸರ್ಕಾರ ಹಾಗೂ
- ಮಹಾ ನಿರ್ದೇಶಕರು, ಐಸಿಎಆರ್ ಹಾಗೂ ಇತರರು -ವಿರುದ್ಧ ಡಿ ಸುಂದರ ರಾಜು, (2011) 6 ಎಸ್ಸಿಸಿ 605

ಆದ್ದರಿಂದ, ಸಂದರ್ಶನಕ್ಕೆ ಶೇ. 50 ರಷ್ಟು ಅಂಕ ಹಂಚಿಕೆಯು ಅಸಮರ್ಥನೀಯವೆಂದು ತೀರ್ಮಾನಿಸಲಾಗಿದೆಯಾದ್ದರಿಂದ, ಆಯ್ಕೆ ಸಮಿತಿಯು ಅಳವಡಿಸಿಕೊಂಡ ಪ್ರಕ್ರಿಯೆಯು ಇತ್ಯರ್ಥಗೊಂಡ ಕಾನೂನು ಸಿದ್ಧಾಂತಗಳಿಗೆ ನಿರಂಕುಶ ಹಾಗೂ ತದ್ವಿರುದ್ಧವಾಗಿದೆ ಎಂದು ವಾದಿಸಲಾಗಿದೆ.

10 (ಬಿ), ಇನ್ನೊಂದೆಡೆ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಅದನ್ನೇ ಪ್ರತಿವಾದಿಸುತ್ತಾರೆ.ಸಂದರ್ಶನಗಳಿಗೆ ಶೇ. 50 ರಷ್ಟು ಪ್ರಮಾಣದ ಅಂಕಗಳ ನೀಡಿಕೆ ಪ್ರಶ್ನೆಯನ್ನು ಅರ್ಜಿದಾರನು ಪ್ರಶ್ನಿಸಲು ಸಾಧ್ಯವಿಲ್ಲ ಎಂದು ಅವರು ವಾದಿಸುತ್ತಾರೆ.ಪ್ರತ್ಯರ್ಜಿದಾರರು ಯಾವುದೇ ಹೊಸ ಪ್ರಕ್ರಿಯೆಯನ್ನು ಅಳವಡಿಸಿಕೊಂಡಿರುವುದಿಲ್ಲ.ಅವುಗಳನ್ನು 1997 ರ ವಿನಿಯಮಗಳು ನಿಯಂತ್ರಿಸುತ್ತವೆ.ಅಂದಿನಿಂದಲೂ, ಇಂತಹ ಪ್ರತಿಯೊಂದು ಆಯ್ಕೆ ಪ್ರಕ್ರಿಯೆಯಲ್ಲೂ ಈ ವಿನಿಯಮಗಳನ್ನು ಅನುಸರಿಸಲಾಗಿದೆ.ಅದಲ್ಲದೇ, ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಸಂದರ್ಶನಕ್ಕೆ ಹಾಜರಾಗುವಾಗ ಇದನ್ನು ಪ್ರಶ್ನಿಸದ ಅರ್ಜಿದಾರರು ಇದೇ ಪ್ರಕ್ರಿಯೆಯನ್ನು ಈಗ ಪ್ರಶ್ನಿಸಲು ಸಾಧ್ಯವಿರುವುದಿಲ್ಲ.ಅದರ ಸಮರ್ಥನೆಯಲ್ಲಿ, ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

● ಕೊಚ್ಚಿನ್ ವಿಶ್ವ ವಿದ್ಯಾಲಯ -ವಿರುದ್ಧ-ಎನ್.ಎಸ್.ಕಂಜೂಂಜಮ್ಮ, ಎಐಆರ್ 1997 ಎಸ್ಸಿಸಿ 2083

● ಧನಂಜಯ ಮಲಿಕ್ –ವಿರುದ್ಧ ಉತ್ತರಾಂಚಲ ರಾಜ್ಯ ಸರ್ಕಾರ (2008) 4 ಎಸ್ಸಿ 171

● ಕೆ.ಎಚ್.ಸಿರಾಜ್ -ವಿರುದ್ಧ ಕೇರಳ ಉಚ್ಚ ನ್ಯಾಯಾಲಯ (2006) 6 ಎಸ್ಸಿಸಿ 395 ಮತ್ತು

● ಮದನ್ ಲಾಲ್ -ವಿರುದ್ಧ-ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರ (1995) 3 ಎಸ್ಸಿಸಿ 486

10 (ಸಿ). ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಗಿದೆ ಹಾಗೂ ಈ ಮೊದಲು ಹೇಳಿದ ತೀರ್ಪುಗಳನ್ನು ಪರಿಗಣಿಸಲಾಗಿದೆ.ಆಶೋಕ್ ಕುಮಾರ್ಯಾದವ್ ವಿರುದ್ಧ ಹರಿಯಾಣ ರಾಜ್ಯ (ಮೇಅನ) ಸರ್ಕಾರದ ಮೊಕದ್ದಮೆಯಲ್ಲಿ, ಕಂಡಿಕೆಸಂಖ್ಯೆ: 26 ರಲ್ಲಿ ಮೌಖಿಕ ಪರೀಕ್ಷೆಗಾಗಿ ಮಾಜಿ ಸೇವಾ ಅಧಿಕಾರಿಗಳ ವಿಷಯದಲ್ಲಿ ಹಾಗೂ ಇತರ ಅಭ್ಯರ್ಥಿಗಳ ವಿಷಯದಲ್ಲಿ ಶೇಕಡ 33.3 ಅಂಕಗಳನ್ನು ಶೇಕಡ 22.2 ಅಂಕಗಳನ್ನು ನಿಗದಿಗೊಳಿಸಿದಾಗ, ಆಯ್ಕೆ ಪ್ರಕ್ರಿಯೆಯನ್ನು ನಿರಂಕುಶವೆಂದು ಪರಿಗಣಿಸಲು ಸಾಧ್ಯವಿದೆ ಎಂದು

ತೀರ್ಮಾನಿಸಲಾಗಿತ್ತು.ಮೌಖಿಕ ಪರೀಕ್ಷೆಯಲ್ಲಿ ನಿಗದಿಯಾದ ಅಂಕಗಳು ಲಿಖಿತ ಪರೀಕ್ಷೆಗೆ ನಿಗದಿಯಾದ ಅಂಕಗಳಿಗೆ ಹೋಲಿಸಿದಾಗ ಅತ್ಯಧಿಕವಾಗಿರುವುದರಿಂದ, ಮೌಖಿಕ ಪರೀಕ್ಷೆಯು ಆಯ್ಕೆ ಪ್ರಕ್ರಿಯೆಯಲ್ಲಿ ಒಂದು ನಿರ್ಣಾಯಕ ಅಂಶವಾಗುವ ಸಾಧ್ಯತೆಯನ್ನು ಹೊಂದಿರುತ್ತದೆ.ಆದ್ದರಿಂದ, ಒಬ್ಬ ಅಭ್ಯರ್ಥಿಯು ಒಂದೊಮ್ಮೆ ಲಿಖಿತ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದರೂ ಸಹ, ಸಂದರ್ಶನದಲ್ಲಿ ಅತೀ ಕಡಿಮೆ ಅಂಕಗಳನ್ನು ನೀಡುವುದರ ಮೂಲಕ ಆತನನ್ನು ಸ್ಪರ್ಧೆಯಿಂದ ಹೊರಗಿಡಬಹುದಾಗಿದೆ.ಇದಲ್ಲದೆ, ತೀರ್ಪಿನ ಕಂಡಿಕೆ ಸಂಖ್ಯೆ.29 ರಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಲೋಕಸೇವಾ ಆಯೋಗವು ಭಾರತೀಯ ಆಡಳಿತ ಸೇವೆಗೆ ಹಾಗೂ ಇನ್ನಿತರ ತತ್ಸಂಬಂಧೀ ಸೇವೆಗಳಿಗೆ ಆಯ್ಕೆ ಮಾಡುವ ಸಂದರ್ಭದಲ್ಲಿ ಮೌಖಿಕ ಪರೀಕ್ಷೆಗೆ ನಿಗದಿಪಡಿಸಿರುವ ಅಂಕಗಳು ಶೇಕಡ 12.2 ಆಗಿದ್ದು, ಅದು ನ್ಯಾಯಸಮ್ಮತವೂ, ನ್ಯಾಯಯುತವೂ ಆಗಿ ಕಂಡುಬಂದಿದೆ ಎಂದು ತೀರ್ಪು ನೀಡಿದೆ.ಆದ್ದರಿಂದ, ಲಿಖಿತ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆಗಳ ನಡುವೆ ಒಂದು ಸೂಕ್ತವಾದ ಸಮತೋಲನವನ್ನು ಕಾಯ್ದುಕೊಳ್ಳುವುದು ಅಗತ್ಯವಾಗಿರುತ್ತದೆ.ಅದರ ಆಧಾರದಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಯು ಒಂದು ಲಿಖಿತ ಪರೀಕ್ಷೆ ಹಾಗೂ ತದನಂತರ ಒಂದು ಮೌಖಿಕ ಪರೀಕ್ಷೆಯನ್ನೊಳಗೊಂಡು, ಮೌಖಿಕ ಪರೀಕ್ಷೆಗೆ ನಿಗದಿಗೊಳಿಸಿದ ಅಂಕಗಳು ಶೇಕಡ 12.2 ನ್ನು ಮೀರತಕ್ಕದ್ದಲ್ಲ ಎಂಬ ನಿರ್ದಿಷ್ಟ ಸೂಚನೆಗಳನ್ನು ಹೊರಡಿಸಲಾಗಿತ್ತು.ಆದಾಗ್ಯೂ, ಪ್ರಸ್ತುತ ಮೊಕದ್ದಮೆಗೆ ಸಂಬಂಧಿಸಿದಂತೆ, ಇದು ಭಾರತೀಯ ಆಡಳಿತ ಸೇವೆಗೆ ರಾಜ್ಯ ಸರ್ಕಾರೇತರ ಸಿವಿಲ್ ಸೇವಾ ಅಧಿಕಾರಿಗಳ ಆಯ್ಕೆಗೆ ಸಂಬಂಧಿಸಿದ ವಿಷಯವಾಗಿದೆ.ಅದರ ಅನುಸರಣೆಯಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ವೈಯಕ್ತಿಕ ಸಂದರ್ಶನಕ್ಕೆ 50 ಅಂಕಗಳ ನಿಗದಿಯು ಅಭ್ಯರ್ಥಿಯ ನ್ಯಾಯಯುತವಾದ ಮೌಲ್ಯಮಾಪನವಾಗಿದ್ದು, ಎಂ.ವಿ. ತಿಮ್ಮಯ್ಯ ಮತ್ತು ಇತರರು -ವಿರುದ್ಧ ಕೇಂದ್ರ ಲೋಕ ಸೇವಾ ಆಯೋಗ ಮತ್ತು ಇತರರು ಮೊಕದ್ದಮೆಯಲ್ಲಿ ನೀಡಲಾದ ತೀರ್ಪಿನಂತೆ, ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂದು ನಿರಪೇಕ್ಷವಾಗಿ ತೀರ್ಪು ನೀಡಿದೆ.

10 (ಡಿ) ಇದಲ್ಲದೆ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಂದರ್ಶನಕ್ಕೆ ಶೇ .50 ಅಂಕಗಳನ್ನು ನಿಗದಿಗೊಳಿಸುವ ವಿಷಯಕ್ಕೆ ಸಂಬಂಧಿಸಿದ ತೀರ್ಪುಗಳನ್ನು ಪರಿಗಣಿಸಿ ಕೊಚ್ಚಿನ್ ವಿಶ್ವವಿದ್ಯಾಲಯ -ವಿರುದ್ಧ- ಎನ್.ಎಸ್.ಕಂಜೂಂಜಮ್ಮ (ಮೇಅನ) ಮೊಕದ್ದಮೆಯಲ್ಲಿ ಹಾಗೂ ಕೆ.ಎಚ್. ಸಿರಾಜ್ -ವಿರುದ್ಧ ಕೇರಳ ಉಚ್ಚ ನ್ಯಾಯಾಲಯ (ಮೇಅನ) ಮೊಕದ್ದಮೆಯಲ್ಲಿ ಕಂಡುಬಂದಂತೆ ಸಂದರ್ಶನದಲ್ಲಿ ಭಾಗವಹಿಸಿರುವ ಅರ್ಜಿದಾರರು ಸ್ವಯಂ ತಾವೇ ತಮ್ಮನ್ನು ಒಡ್ಡಿಕೊಂಡಿರುವ ಪ್ರಕ್ರಿಯೆಯನ್ನೇ ಪ್ರಶ್ನಿಸಲು ಅವರಿಗೆ ಅವಕಾಶವಿಲ್ಲ ಎಂದು ತೀರ್ಪು ನೀಡಿತ್ತು.ಗುಣಾವಗುಣಗಳಿಗೆ ಸಂಬಂಧಿಸಿದಂತೆಯೂ, ತಿಮ್ಮಯ್ಯ ಮತ್ತು ಇತರರು -ವಿರುದ್ಧ ಕೇಂದ್ರ ಲೋಕ ಸೇವಾ ಆಯೋಗ ಮತ್ತು ಇತರರು (ಮೇಲಿನ) ಹಾಗೂ ಅನ್ವರ್ ಅಹ್ಮದ್- ವಿರುದ್ಧ ಬಿಹಾರ ರಾಜ್ಯ ಸರ್ಕಾರ ಮತ್ತು ಇತರರು ತೀರ್ಪುಗಳ ದೃಷ್ಟಿಯಿಂದ, ಕಾನೂನಿನ ಸ್ಥಾನವು ಬಹಳ ಸ್ಪಷ್ಟವಾಗಿದೆ.ಭಾ.ಆ.ಸೇ. ಆಯ್ಕೆ ಸಮಿತಿಯು ಸಂದರ್ಶನದ ಉದ್ದೇಶಕ್ಕಾಗಿ ಶೇಕಡ 50 ಅಂಕಗಳನ್ನು ಪರಿಗಣಿಸಿರುವುದನ್ನು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮೊದಲು ಹೇಳಿದ ತೀರ್ಪುಗಳಲ್ಲಿ ಅ ಎತ್ತಿಹಿಡಿದಿರುತ್ತದೆ.ಆದ್ದರಿಂದ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರಸ್ತಾಪಿಸಿದಂತೆ ವಿಭಿನ್ನ ದೃಷ್ಟಿಯನ್ನು ತಳೆಯಲು ಯಾವುದೇ ಕಾರಣಗಳು ನಮಗೆ ಕಂಡುಬಂದಿರುವುದಿಲ್ಲ.ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲೆ ಚ ಹೇಳಿದ ತೀರ್ಪುಗಳ ದೃಷ್ಟಿಯಿಂದ, ಸಂದರ್ಶನದ ಉದ್ದೇಶಕ್ಕಾಗಿ ಶೇಕಡ 50 ಅಂಕಗಳನ್ನು ನೀಡುವುದರಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲವೆಂಬ ನಿರ್ಣಯಕ್ಕೆ ಬರುವಲ್ಲಿ ನ್ಯಾಯಾಧಿಕರಣವು ಸಮರ್ಥನೀಯವಾಗಿತ್ತು.

11. ಮಾನ್ಯ ನ್ಯಾಯವಾದಿಗಳು ಒತ್ತಿ ಹೇಳಿದ ಮುಂದಿನ ಕಾರಣವು ಭಾ.ಆ.ಸೇ. (ಆಯ್ಕೆಯ ಮೂಲಕ ನಿಯುಕ್ತಿ) ವಿನಿಯಮಗಳು, 1997 ರ ನಿಬಂಧನೆಗಳಿಗನುಸಾರವಾಗಿ, ರಾಜ್ಯ ಸರ್ಕಾರೇತರ ಸಿವಿಲ್ ಸೇವಾ ಅಧಿಕಾರಿಗಳ ನಿಯುಕ್ತಿಗಿರುವ ಪ್ರಕ್ರಿಯೆಯನ್ನು ಆಧರಿಸಿದೆ.ಅದರಲ್ಲಿ, ಕಂಡಿಕೆ ಬಿ .2 ರಲ್ಲಿ, ಅರ್ಹ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗೆ ಅಂಕಗಳನ್ನು ನಿಗದಿಪಡಿಸುವಾಗ, ಸಮಿತಿಯು ' ಉತ್ಕೃಷ್ಟ ಸಾಧನೆಗಾಗಿ 10 ಅಂಕಗಳನ್ನು, ' ಅತೀ ಉತ್ತಮ ಸಾಧನೆಗಾಗಿ 8 ಅಂಕಗಳನ್ನು ಹಾಗೂ ' ಉತ್ತಮ ' ಸಾಧನೆಗಾಗಿ 6 ಅಂಕಗಳನ್ನು ಮೌಲ್ಯಮಾಪನದ ಆಯಾಯ ವರ್ಷದಲ್ಲಿ (ಗಳ) ನಿಗದಿಪಡಿಸಬಹುದು ಎಂದು ನಿರೂಪಿಸಲಾಗಿದೆ.ಮೂವರೂ ಅಭ್ಯರ್ಥಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಪರಿಗಣಿಸಿದಾಗ, ಅದು ಅರ್ಜಿದಾರನು ಗಳಿಸಿದ ' ಉತ್ಕೃಷ್ಟ'ದ ಸಾಧನೆಯ ಅಂಕವು ಉಳಿದ ಎರಡು ಅಭ್ಯರ್ಥಿಗಳಿಗಿಂತ ಬಹಳ ಅಧಿಕವಾಗಿದೆ ಎಂದು ಸೂಚಿಸುತ್ತದೆ.ನಾವು ಶೋಧನಾ ಸಮಿತಿಯ ಸಭೆಯ ನಡವಳಿಗಳ ಜೊತೆಗೆ ಒಂದು ಅನುಬಂಧದ ರೂಪದಲ್ಲಿ ಹಾಜರುಪಡಿಸಲಾಗಿರುವ ಸಂಬಂಧಿತ ರೇಖಾಪಟವನ್ನು ಪರಿಗಣಿಸಿರುತ್ತೇವೆ.ಅದರಲ್ಲಿ ಹಿಂದಿನ ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಸಮರ್ಥಿಸಲಾಗಿದೆ.ನಾವು ಪ್ರಸ್ತುತ ಅರ್ಜಿದಾರ, ಪ್ರತ್ಯರ್ಜಿದಾರಸಂಖ್ಯೆ: 5, 12 ಮತ್ತು 13 ಇವರ ಬಗ್ಗೆ ಚಿಂತಿಸುತ್ತಿದ್ದೇವೆ.ಅರ್ಜಿದಾರ ಹಾಗೂ ಪ್ರತ್ಯರ್ಜಿದಾರಸಂಖ್ಯೆ: 5 ಇವರಿಗೆ ಸಂಬಂಧಿಸಿದ ಮಟ್ಟಿಗೆ, ಅವರು ಹಿಂದಿನ ಐದೂ ವರ್ಷಗಳಲ್ಲಿಯೂ ಉತ್ಕೃಷ್ಟ ಶ್ರೇಣಿಯನ್ನು ಪಡೆದಿರುತ್ತಾರೆ.ಪ್ರತ್ಯರ್ಜಿದಾರಸಂಖ್ಯೆ: 12 ಇವರಿಗೆ ಸಂಬಂಧಿಸಿದ ಮಟ್ಟಿಗೆ, ಅವರು 2004-05ನೇ ಸಾಲಿನಲ್ಲಿ ಅತೀ ಉತ್ತಮ ಶ್ರೇಣಿಯನ್ನು ಪಡೆದಿರುತ್ತಾರೆ.ಪ್ರತ್ಯರ್ಜಿದಾರಸಂಖ್ಯೆ: 13 ಇವರಿಗೆ ಸಂಬಂಧಿಸಿದಂತೆ, ಅವರು 2004-05ನೇ ಹಾಗೂ 2005-06ನೇ ಸಾಲಿನಲ್ಲಿ ಅತೀ ಉತ್ತಮ ಶ್ರೇಣಿಯನ್ನು ಗಳಿಸಿರುತ್ತಾರೆ.ಆದ್ದರಿಂದ, ಒಂದೊಮ್ಮೆ ಭಾ.ಆ.ಸೇ ವಿನಿಯಮಗಳಲ್ಲಿ ಸೂಚಿಸಿದಂತೆ ಅಂಕಗಳನ್ನು ಅನುಸರಿಸಬೇಕಾದರೆ, ಅರ್ಜಿದಾರ ಹಾಗೂ ಪ್ರತ್ಯರ್ಜಿದಾರಸಂಖ್ಯೆ: 5 ಇವರೀರ್ವರೂ ಅತ್ಯಧಿಕ ಅಂಕಗಳನ್ನು ಪಡೆದಿರುತ್ತಾರೆ.ಆದ್ದರಿಂದ, ಅರ್ಜಿದಾರರು ಆಯ್ಕೆಯಾಗದಿರುವುದು ನ್ಯಾಯಯುತವಾಗಿಲ್ಲ.ಪ್ರತ್ಯರ್ಜಿದಾರ-ಯು.ಪಿ.ಎಸ್.ಸಿ.ಇವರ ಪರ ಮಾನ್ಯ ನ್ಯಾಯವಾದಿಗಳು, ಇದನ್ನು ಪ್ರತಿವಾದಿಸಿದ್ದಾರೆ.ಅವರು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಪರಿಗಣನೆಯು ಕೇವಲ ಒಂದು ಮಾರ್ಗದರ್ಶಕ ಸೂತ್ರವಾಗಿದೆ ಎಂದು ವಾದಿಸುತ್ತಾರೆ.ಆಯ್ಕೆ ಸಮಿತಿಯು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಗಣತೀಯ ರೀತಿಯಲ್ಲಿ ನೋಡಲು ನಿರೀಕ್ಷಿಸುವುದಿಲ್ಲ.ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಪರಿಗಣಿಸಿ, ಬಳಿಕ ಪ್ರತೀ ಅಭ್ಯರ್ಥಿಯನ್ನೂ ಮೌಲ್ಯಮಾಪನಕ್ಕೊಳಪಡಿಸಬೇಕು.ಉತ್ಕೃಷ್ಟ ಗುಣಾರ್ಹತೆಗಳುಳ್ಳ ಅಭ್ಯರ್ಥಿಗಳು ಕೆಳಗಿನ ಹಂತಕ್ಕಿಳಿದ ಹಾಗೂ ಸಾಮಾನ್ಯ ಅಭ್ಯರ್ಥಿಗಳು ಮೇಲಿನ ಹಂತಕ್ಕೇರಿದ ಎಷ್ಟೋ ಉದಾಹರಣೆಗಳಿರುವ ಸನ್ನಿವೇಶಗಳಿವೆ.ಆದ್ದರಿಂದ, ಪ್ರತೀ ಅಭ್ಯರ್ಥಿಯ ಗುಣಾರ್ಹತೆಗಳನ್ನು ಸ್ವತಂತ್ರವಾಗಿ ಪರಿಗಣಿಸಿ, ಬಳಿಕ ಅವರ ಕಾರ್ಯನಿರ್ವಹಣಾ ವರದಿಗಳ ಆಧಾರದಲ್ಲಿ ಅವರಿಗೆ ಸೂಕ್ತ ಅಂಕಗಳನ್ನು ನೀಡುವುದು ಆಯ್ಕೆ ಸಮಿತಿಗೆ ಸಂಬಂಧಪಟ್ಟಿರುತ್ತದೆ.ಅಷ್ಟರ ಮಟ್ಟಿಗೆ ಆಯ್ಕೆ ಸಮಿತಿಯ ಕರ್ತವ್ಯ ಹಾಗೂ ವಿವೇಚನೆಯನ್ನು ಕೇವಲ ಕಾರ್ಯನಿರ್ವಹಣಾ ವರದಿಯ ಅನ್ವಯದ ಮೂಲಕ ಪರಿಗಣಿಸಲು ಸಾಧ್ಯವಿಲ್ಲ ಎಂದು ವಾದಿಸಲು ಕಂಡಿಕೆಸಂಖ್ಯೆ: 35 ರಿಂದ 38 ನ್ನು ಉಲ್ಲೇಖಿಸಿ, ತಿಮ್ಮಯ್ಯನ ಮೊಕದ್ದಮೆಯ ತೀರ್ಪನ್ನು ಅವಲಂಬಿಸಲಾಗಿದೆ.

12. ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ಬಳಿಕ, ನಾವು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ವ್ಯಾಖ್ಯಾನಿಸುವ ಪ್ರಶ್ನೆಗೆ ಸಂಬಂಧಿಸಿದಂತೆ, ಹಾಗೆ ಮಾಡುವುದು ಅನನ್ಯವಾಗಿ ಆಯ್ಕೆ ಸಮಿತಿಯ ವಿವೇಚನೆಯಾಗಿದೆ ಎಂಬ ಅಭಿಪ್ರಾಯ ಹೊಂದಿರುತ್ತೇವೆ.ಆಯ್ಕೆ ಸಮಿತಿಯು ವಾರ್ಷಿಕ ಕಾರ್ಯನಿರ್ವಹಣಾ

ವರದಿಗಳಿಗೆ ಅವಶ್ಯಕವಾಗಿ ನಿರ್ಬಂಧಿತವಾಗಿಲ್ಲ.ಆಯ್ಕೆ ಸಮಿತಿಯು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿರುವ ಅಂಕದ ವಿವರಗಳು ಕೇವಲ ಸೂಚ್ಯವಾಗಿವೆ.ಇದು ಆಯ್ಕೆ ಸಮಿತಿಯು ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ಬಿಂಬಿತವಾಗಿರುವುದನ್ನು ಬಿಟ್ಟು ಬೇರೆ ನಿರ್ಣಯಕ್ಕೆ ಬರುವುದನ್ನು ಪ್ರತಿರೋಧಿಸುವುದಿಲ್ಲ.ಅವುಗಳು ಮತ್ತು ವಿಮರ್ಶೆಯ ಹಕ್ಕನ್ನು ಹೊಂದಿರುತ್ತವೆ.ವಾಸ್ತವವಾಗಿ, ಈ ಮೊದಲು ಹೇಳಿದ ತೀರ್ಪಿನಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈಗ ಮುಂದಿರುವ ವಿವಾದಾಂಶವನ್ನು ನಿರಪೇಕ್ಷವಾಗಿ ಹೇಳಿದೆ.ಸನ್ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ಅದರಲ್ಲಿ, ನ್ಯಾಯಾಲಯವು ಸಾಮಾನ್ಯವಾಗಿ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಮೌಲ್ಯಮಾಪನ ಮಾಡುವ ಅಪೀಲಿನ ನ್ಯಾಯಾಲಯವಾಗಿ ಅಥವಾ ಶಾಸನಬದ್ಧ ಆಯ್ಕೆ ಸಮಿತಿಯ ಮೇಲೆ ಅಂತಹ ಅಧಿಕಾರವನ್ನು ಪಡೆಯುವ ನ್ಯಾಯಾಧಿಕರಣವಾಗಿ ಪೀಠದಲ್ಲಿರುವುದಿಲ್ಲ ಎಂದು ನಿರ್ಣಯಿಸಿದೆ.ಮಾರ್ಗದರ್ಶಕ ಸೂತ್ರಗಳು, ಅಂತಹ ಮೌಲ್ಯಮಾಪನವನ್ನು ಮಾಡುವ ಪ್ರಕ್ರಿಯೆಯಲ್ಲಿ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಹೇಗೆ ಮೌಲ್ಯಮಾಪನ ಮಾಡಬೇಕು ಎಂಬುದನ್ನು ನಿಯಮಿಸುತ್ತವೆ.ರಾಜ್ಯ ಸರ್ಕಾರದ ಅಭಿಪ್ರಾಯಗಳನ್ನು ಪಡೆಯಲಾಗುತ್ತದೆ ಹಾಗೂ ತದನಂತರ, ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಶೀಲಿಸಿ ಒಂದು ಆಯ್ಕೆ ಪಟ್ಟಿಯನ್ನು ತಯಾರಿಸಬೇಕಾಗುತ್ತದೆ.ಆಯ್ಕೆ ಸಮಿತಿಯು ಮಾಡಿದ ಮೌಲ್ಯಮಾಪನವನ್ನು ಅದು ದುರುದ್ದೇಶದಿಂದ ಕೂಡಿರದ ಹೊರತು ಪರಿಶೀಲನೆಗೆ ಒಡ್ಡುವಂತಿಲ್ಲ.ಇದಲ್ಲದೆ, ರಮಾನಂದ್ ಪ್ರಸಾದ್ ಸಿಂಗ್ ಮತ್ತು ಇನ್ನೊಬ್ಬರು -ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು 10 ಮೊಕದ್ದಮೆಯಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಹಿಂದಿನ ತೀರ್ಪನ್ನು ಪುನಃ ದೃಢೀಕರಿಸಲಾಗಿದ್ದು, ಅದರಲ್ಲಿ ಸಮಿತಿಯು ಸೇವಾ ದಾಖಲೆಗಳು ತನ್ನ ಗಮನವನ್ನು ಹರಿಸಿ, ಅದು ತನ್ನದೇ ಆದ ಮೌಲ್ಯಮಾಪನವನ್ನು ಮಾಡಬೇಕು ಹಾಗೂ ಆ ಬಳಿಕ, ಅಭ್ಯರ್ಥಿಗಳನ್ನು ' ಉತ್ಕೃಷ್ಟ ', ' ಅತೀ ಉತ್ತಮ ' ಹಾಗೂ ' ಉತ್ತಮ ' ಇತ್ಯಾದಿಯಾಗಿ ಗುರುತಿಸಬೇಕು ಎಂದು ತೀರ್ಮಾನಿಸಲಾಗಿತ್ತು ಎಂದು ತೀರ್ಪು ನೀಡಲಾಯಿತು.ಆದ್ದರಿಂದ, ಆಯ್ಕೆ ಸಮಿತಿಯು ವರದಿ ಮಾಡಿಕೊಳ್ಳುವ ಅಥವಾ ಪುನರೀಕ್ಷಿಸಿದ ಅಧಿಕಾರಿಗಳು ನೀಡಿದ ಅದೇ ಶ್ರೇಣಿಯನ್ನು ಅಳವಡಿಸಿಕೊಳ್ಳಬೇಕು ಎಂದು ಅದು ಅವಶ್ಯಕವಾಗಿ ಅರ್ಥೈಸುವುದಿಲ್ಲ.

13. ಯುಪಿಎಸ್ಸಿ -ವಿರುದ್ಧ – ಕೆ. ರಾಜಯ್ಯ ಮತ್ತು ಇತರರು " ಮೊಕದ್ದಮೆಯಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನೂ ಸಹ ಪುನಃ ಚ ದೃಢೀಕರಿಸಲಾಯಿತು.ಅದರಲ್ಲಿ, ನ್ಯಾಯಾಲಯವು ಯಾವುದೇ ಒಂದು ವರ್ಷದಲ್ಲಿ ಮೊದಲ ಪ್ರತ್ಯರ್ಜಿದಾರರ ಹಾಗೆ ಹೇಳಲಾಗಿರುವ ಅಧೀನ ಶ್ರೇಣೀಕರಣದ ದೋಷವನ್ನು ಎಸಗಬಾರದಿತ್ತು ಎಂದು ತೀರ್ಪು ನೀಡಲಾಯಿತು.ಅಭ್ಯರ್ಥಿಗಳನ್ನು ಉತ್ಕೃಷ್ಟ ' ಅತಿ ಉತ್ತಮ ', ' ಉತ್ತಮ ' ಹಾಗೂ ' ಅನರ್ಹ ' ಎಂದು ವರ್ಗೀಕರಿಸುವ ಅಧಿಕಾರವು ಆಯ್ಕೆ ಸಮಿತಿಗೆ ನಿಹಿತವಾಗಿದೆ.ಅದು ಆಯ್ಕೆ ಪ್ರಕ್ರಿಯೆಗೆ ಪ್ರಾಸಂಗಿಕವಾದ ಒಂದು ಪ್ರಕಾರ್ಯವಾಗಿದೆ.ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ರಾಜ್ಯ ಸರ್ಕಾರವು ಮಾಡಿದ ವರ್ಗಿಕರಣವು ಸಮಿತಿಯ ಮೇಲೆ ಬಂಧನಕಾರಿಯಾಗಿರುವುದಿಲ್ಲ.ಆಯ್ಕೆ ಸಮಿತಿಯು ರಾಜ್ಯ ಸರ್ಕಾರ ಅಳವಡಿಸಿಕೊಂಡಿರುವ ವರ್ಗೀಕರಣದಿಂದ ಮಾರ್ಗದರ್ಶಿತವಾಗಿದ್ದರೂ ಸಹ, ಸರಿಯಾದ ಕಾರಣಗಳಿಗಾಗಿ, ಆಯ್ಕೆ ಸಮಿತಿಯು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ನೀಡಿರುವ ಶ್ರೇಣೀಕರಣದೊಂದಿಗೆ ವ್ಯತ್ಯಾಸದಲ್ಲಿರಬಹುದಾದ ತನ್ನದೇ ಆದ ವರ್ಗೀಕರಣವನ್ನು ರೂಪಿಸಬಹುದು.

14. ಅಂಕಗಳ ವೈಯಕ್ತಿಕ ಮೌಲ್ಯಮಾಪನವನ್ನು ಮಾಡಿ, ಆ ಬಳಿಕ, ಅಂತಹ ಒಂದು ಸ್ವತಂತ್ರ ಮೌಲೀಕರಣದ ಆಧಾರದಲ್ಲಿ ಅಭ್ಯರ್ಥಿಗಳನ್ನು ಶ್ರೇಣೀಕರಿಸುವುದು ಆಯ್ಕೆ ಸಮಿತಿಯ ಕರ್ತವ್ಯ ಹಾಗೂ

ಜವಾಬ್ದಾರಿಯಾಗಿದೆ.ಅವರು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಿಂದ ಮಾರ್ಗದರ್ಶನ ಪಡೆದರೂ ಸಹ, ಅವರು ಅವುಗಳಿಂದ ಬಂಧಿತರಾಗುವುದಿಲ್ಲ.ಆದ್ದರಿಂದ, ಅಂತಹ ವಾದವನ್ನು ಅಂಗೀಕರಿಸಲು ಸಾಧ್ಯವಿಲ್ಲ.

15. ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಆಧಾರದಲ್ಲಿ, ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಅಂಕಗಳನ್ನು ಆಯ್ಕೆ ಸಮಿತಿಯು ಸಮಾನೀಕರಿಸಿದೆ ಎಂಬುದು ಇಲ್ಲಿ ಮಂಡಿಸಲಾಗಿರುವ ಮತ್ತೊಂದು ಕಾರಣವಾಗಿದೆ.ಪ್ರತಿಯೊಬ್ಬ ಅಭ್ಯರ್ಥಿಯು ಬೇರೆ ಬೇರೆ ವರ್ಷಗಳಲ್ಲಿ ಬೇರೆ ಬೇರೆ ಶ್ರೇಣೀಕರಣವನ್ನು ಗಳಿಸಿದ್ದರೂ ಸಹ, ಅವರೆಲ್ಲರಿಗೂ ಸದರಿ ಉದ್ದೇಶಕ್ಕಾಗಿ ಶೇಕಡಾ 40 ಅಂಕಗಳನ್ನು ನಿಗದಿಪಡಿಸಲಾಗಿತ್ತು.ಅದನ್ನು ಪ್ರತ್ಯರ್ಜಿದಾರ-ಯುಪಿಎಸ್ಸಿ ಅವರ ಪರ ಮಾನ್ಯ ನ್ಯಾಯವಾದಿಗಳು ಅಂತಹ ವಾದವನ್ನು ಅರ್ಜಿದಾರರು ನ್ಯಾಯಾಧಿಕರಣದ ಮುಂದೆ ತಂದಿರಲಿಲ್ಲ ಎಂಬ ಆಧಾರದಲ್ಲಿ ಆಕ್ಷೇಪಿಸಿರುತ್ತಾರೆ.ಆದ್ದರಿಂದ, ಅದನ್ನು ಪ್ರತಿವಾದಿಸಲು ಅವರಿಗೆ ಅವಕಾಶವಿರಲಿಲ್ಲ.ಆದ್ದರಿಂದ, ನಾವು ನ್ಯಾಯಾಧಿಕರಣದ ಮುಂದೆ ಅರ್ಜಿದಾರರ ವಾದಗಳನ್ನು ಪರಿಶೀಲಿಸಿರುತ್ತೇವೆ.ನಮಗೆ ಮೂಲ ಅರ್ಜಿಯಲ್ಲಿ ಏನೂ ಕಂಡುಬಂದಿರುವುದಿಲ್ಲ.ಒಂದು ತಿದ್ದುಪಡಿಯಾದ ಅರ್ಜಿಯನ್ನು ಸಲ್ಲಿಸಲಾಯಿತು ಹಾಗೂ ಅದನ್ನು ತರುವಾಯ ನ್ಯಾಯಾಧಿಕರಣವು ಅಂಗೀಕರಿಸಿತು.ಅದನ್ನೂ ಕೂಡಾ ಈ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿದೆ.

16. ವಾದಗಳನ್ನು ಪರಿಗಣಿಸಿದ ಬಳಿಕ, ಅ ಅಂತಹ ಂ ತಹ ವಾದಾಂಶವನ್ನು ನ್ಯಾಯಾಧಿಕರಣದ ಮುಂದೆ ಅರ್ಜಿದಾರರು ತಂದಿರುವುದಾಗಲೀ, ವಾದಿಸಿರುವುದಾಗಲೀ ನಮಗೆ ಕಂಡುಬಂದಿಲ್ಲ.ಇದೇ ಕಾರಣಕ್ಕೆ ಯು.ಪಿ.ಎಸ್.ಸಿ.ಯು ಅಂತಹ ಕೇಮನ್ನು ಪ್ರತಿವಾದಿಸುವ ಸ್ಥಾನದಲ್ಲಿರಲಿಲ್ಲ.ಈ ವಿಷಯದಲ್ಲಿ, ನ್ಯಾಯಾಧಿಕರಣವು ಅಂಗೀಕರಿಸಿದ ಹೆಚ್ಚುವರಿ ತಿದ್ದುಪಡಿಯಾದ ವಾದಾಂಶಕ್ಕೆ ಕಂಡಿಕೆಸಂಖ್ಯೆ: (ಎಚ್) ನಲ್ಲಿ ವಾದಿಸಿರುವುದು, ಈ ಮುಂದಿನಂತಿದೆ:

CC (ಎಚ್) ಆಯ್ಕೆ ಸಮಿತಿಯ ಹೆಚ್ಚಿನ ಸದಸ್ಯರು (ಅವರಿಗೆ ಅಭ್ಯರ್ಥಿಗಳ ನಿಜವಾದ ಅರಿವಿತ್ತು) 8 ವರ್ಷಗಳ ಎಲ್ಲಾ ಸೇವಾ ದಾಖಲೆಗಳು/ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಅರ್ಜಿದಾರನಿಗೆ ನೀಡಲಾದ ' ಉತ್ಕೃಷ್ಟ ' ಎಂಬ ಶ್ರೇಣೀಕರಣವನ್ನು ಅಂಗೀಕರಿಸಿದ್ದರೂ, ಅಲ್ಪಸಂಖ್ಯಾತ ಸದಸ್ಯರು ಈ ಬಹುಸಂಖ್ಯಾತ ಸದಸ್ಯರೊಂದಿಗೆ ಒಪ್ಪಿಕೊಂಡಿದ್ದು, ಶ್ರೇಣೀಕರಣವನ್ನು ಯಾವುದೇ ಕಾರಣಗಳಿಲ್ಲದೆ ರೂಪಿಸಲಾಗಿದೆ ಹಾಗೂ ಎಲ್ಲಾ 15 ಅಭ್ಯರ್ಥಿಗಳನ್ನು ಅಸಮ ಂ ಜಸವಾಗಿ ಸಮಾನೀಕರಿಸಲಾಗಿದೆ.ಮೌಖಿಕ ಪರೀಕ್ಷೆಗೆ ಭಾರೀ ಪ್ರಮಾಣದ ಶೇ .50 ಅಂಕಗಳನ್ನು ನಿಗದಿಗೊಳಿಸಿರುವ ಅಸಾಂವಿಧಾನಿಕ ಪ್ರಕ್ರಿಯೆಯನ್ನು ಅರ್ಜಿದಾರರು ಸೇರಿದಂತೆ ಅತ್ಯಧಿಕ ಗುಣಾರ್ಹತೆಗಳುಳ್ಳ ಅಭ್ಯರ್ಥಿಗಳನ್ನು ಸ್ಥಾನಭ್ರಷ್ಟಗೊಳಿಸಲು ಬಳಸಲಾಗಿದೆ.ಸಮಗ್ರ ಆಯ್ಕೆ ಪ್ರಕ್ರಿಯೆಯು ದುರುಪಯೋಗದ ಕಾರಣದಿ ಂ ದ ಹಾಗೂ ಅಸಾಂವಿಧಾನಿಕ ಪ್ರಕ್ರಿಯೆಯನ್ನು ಅಳವಡಿಸಿರುವುದರಿಂದ ದೂಷಿತಗೊಂಡಿದೆ.ಆದ್ದರಿಂದ, ಅನುಬಂಧ:ಎ -14 ರಲ್ಲಿ ದಿನಾಂಕ 08.09.2011 ರ ಅಧಿಸೂಚನೆಯು ಕಾನೂನಿನಲ್ಲಿ ಅಸಮರ್ಥನೀಯವಾಗಿದೆ ”.

17. ಮೇಲಿನ ಕಂಡಿಕೆಯ ಓದುವಿಕೆಯು ಅರ್ಜಿದಾರರ ವಾದಾಂಶದ ಕೇಂದ್ರವು ಸಂಪೂರ್ಣವಾಗಿ ಹಾಗೂ ಖಚಿತವಾಗಿ ಸಂದರ್ಶನಕ್ಕಿರುವ ಶೇ .50 ಅಂಕಗಳ ಆಧಾರದ ಮೇಲಿದೆ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ.ಸಮೀಕರಣಕ್ಕೆ ಸಂಬಂಧಿಸಿ ಅದರಲ್ಲಿ ಏನು ಹೇಳಲಾಗಿದೆ ಎಂಬುದು ಕೇವಲ ಒಂದು ವಾಸ್ತವಾಂಶದ ವಿಷಯವಾಗಿದ್ದು, ಅದು ಯಾವುದೇ ಕಾರಣವನ್ನು ರೂಪಿಸುವುದಿಲ್ಲ.ಅದರಲ್ಲಿ, ಆಯ್ಕೆ

ಸಮಿತಿಯ ಬಹು ಸಂಖ್ಯಾತ ಹಾಗೂ ಅಲ್ಪ ಬಹುಸಂಖ್ಯಾತ ಸದಸ್ಯರ ನಡುವೆ ಭಿನ್ನಾಭಿಪ್ರಾಯವಿತ್ತು ಹಾಗೂ ಅಲ್ಪ ಸಂಖ್ಯಾತ ಸದಸ್ಯರು ಜಯಗಳಿಸಿದ್ದರು ಎಂದು ನಿರ್ದಿಷ್ಟವಾಗಿ ಹೇಳಲಾಗಿದೆ.ಆಯ್ಕೆ ಸಮಿತಿಯ ಸದಸ್ಯರು ಅರ್ಜಿದಾರರಿಗೆ ನೀಡಿದ ಶ್ರೇಣೀಕರಣವನ್ನು ಅಂಗೀಕರಿಸಿದ್ದರು, ಆದರೆ ಅಲ್ಪಸಂಖ್ಯಾತ ಸದಸ್ಯರು ಬಹುಸಂಖ್ಯಾತ ಸದಸ್ಯರ ಮೇಲೆ ಜಯ ಸಾಧಿಸಿದ್ದು, ಶ್ರೇಣೀಕರಣವನ್ನು ತಿರಸ್ಕರಿಸಲಾಗಿದೆ ಎಂದು ಹೇಳಲಾಗಿದೆ.ಆದ್ದರಿಂದ, ನಮಗೆ ಇದೊಂದು ವಾಸ್ತವಾಂಶದ ಹೇಳಿಕೆಯಾಗಿದ್ದು, ಇದನ್ನು ಒಂದು ಆಧಾರಾಂಶವೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಕಂಡುಬಂದಿರುತ್ತದೆ.ಇದಲ್ಲದೆ ಅರ್ಜಿದಾರರು ನಿರೂಪಿಸಿರುವುದೇನೆಂದರೆ ಬಹುಸಂಖ್ಯಾತ ಸದಸ್ಯರು ಅಲ್ಪಸಂಖ್ಯಾತರ ಮೇಲೆ ಜಯ ಸಾಧಿಸಿದ್ದಾರೆ ಎಂಬುದಾಗಿದೆ.ಆದ್ದರಿಂದ, ನಮಗೆ ಅಂತಹ ಕಾರಣವನ್ನು ತೆಗೆದುಕೊಂಡಿರುವುದು ಕಂಡುಬಂದಿರುವುದಿಲ್ಲ.ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ಜಯ ಸಾಧಿಸಿದರೇ ಅಥವಾ ಅಲ್ಪಸಂಖ್ಯಾತರು ಬಹುಸಂಖ್ಯಾತರ ಮೇಲೆ ಜಯ ಸಾಧಿಸಿದರೇ ಎಂಬ ಪ್ರಶ್ನೆಯ ವಿಷಯಗಳು ಆಯ್ಕೆ ಸಮಿತಿಯ ನಾಲ್ಕು ಮೂಲೆಗಳ ಚೌಕಟ್ಟಿನ ವಿಷಯಗಳಾಗಿವೆ.ನಿರ್ದಿಷ್ಟವಾಗಿ ಅಂತಹ ವಾದವನ್ನು ಮಾಡದಿರುವಾಗ, ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸುವುದು ನ್ಯಾಯಾಲಯಕ್ಕೆ ತಕ್ಕುದಾಗಿರುವುದಿಲ್ಲ.

18. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಅಂತಹ ವಾದವನ್ನು ನ್ಯಾಯಾಧಿಕರಣವು ಪರಿಗಣಿಸಿತ್ತು ಎಂದು ಆಗ್ರಹಿಸಿ, ವಾದಿಸುತ್ತಾರೆ.ಆದ್ದರಿಂದ ಅರ್ಜಿದಾರನ ಪರ ನ್ಯಾಯವಾದಿಗಳು, ಅಂತಿಮ ಪಟ್ಟಿಗೆ ಆಯ್ಕೆಯಾದ ಎಲ್ಲಾ ಹದಿನೈದು ಅಭ್ಯರ್ಥಿಗಳಿಗೆ 40 ಅಂಕಗಳ ಮಂಜೂರಾತಿಗೆ ಸಂಬಂಧಿಸಿದಂತೆ ಉಲ್ಲೇಖಿಸಲಾಗಿರುವ ನ್ಯಾಯಾಧಿಕರಣದ ಆದೇಶದ ಕಂಡಿಕೆಸಂಖ್ಯೆ: 22 ರ ಮೇಲೆ ಅವಲಂಬಿತರಾಗಿದ್ದಾರೆ.ತರುವಾಯ, ನ್ಯಾಯಾಧಿಕರಣವು, ಎಲ್ಲಾ ಅಭ್ಯರ್ಥಿಗಳಿಗೆ 40 ಅಂಕಗಳನ್ನು ನೀಡಲು ಒಪ್ಪಿಕೊಳ್ಳುವುದರಲ್ಲಿ ಆಯ್ಕೆ ಸಮಿತಿಯ ಸದಸ್ಯರಲ್ಲಿ ಅವರಿಗೆ ಯಾವುದೇ ದೋಷವೂ ಕಂಡುಬರುತ್ತಿಲ್ಲ ಎಂದು ಕಂಡಿಕೆಸಂಖ್ಯೆ: 26 ರಲ್ಲಿ ತೀರ್ಪು ನೀಡಿದೆ.

19. ಇನ್ನೊಂದು ಕಡೆಯಲ್ಲಿ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಎಲ್ಲಾ ಅಭ್ಯರ್ಥಿಗಳ ಸಮಗ್ರ ಕಾರ್ಯನಿರ್ವಹಣಾ ವರದಿಗಳನ್ನು ಪರಿಗಣಿಸಿರುವ ಆಯ್ಕೆ ಸಮಿತಿಯು ಅದನ್ನು ಸೂಕ್ತವಾಗಿ ಮೌಲ್ಯಮಾಪನ ಮಾಡಿದೆ ಎಂದು ನ್ಯಾಯಾಧಿಕರಣವು ತನ್ನ ಆದೇಶದ ಕಂಡಿಕೆಸಂಖ್ಯೆ: 22 ರಲ್ಲಿ ಸ್ಪಷ್ಟವಾಗಿ ತೀರ್ಪು ನೀಡಿದೆ ಎಂದು ಸೂಚಿಸುತ್ತಾರೆ.

20. ಮಾನ್ಯ ನ್ಯಾಯವಾದಿಗಳು ಮಾಡಿದ ವಾದಗಳನ್ನು ಆಲಿಸಿದ ನಂತರ, ಅಂತಹ ವಾದಾವನ್ನು ಅರ್ಜಿದಾರರು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಅಥವಾ ಪ್ರತಿವಾದಿಸಿದ್ದಾರೆ ಎಂದು ನಮಗೆ ಕಂಡುಬಂದಿರುವುದಿಲ್ಲ.ಅರ್ಜಿದಾರರು ಒತ್ತಿ ಹೇಳಿರುವ ಹೆಚ್ಚುವರಿ ಕಾರಣಕ್ಕೆ ಸಂಬಂಧಿಸಿದಂತೆ ಕಂಡಿಕೆಸಂಖ್ಯೆ: (ಎಚ್) ನಲ್ಲಿ ವಿರಳ ಉಲ್ಲೇಖ ಮಾಡಿದ್ದರೂ ಸಹ, ಅದು ನ್ಯಾಯಾಧಿಕರಣದ ಮುಂದೆ ಅರ್ಜಿದಾರನ ವಾದಾಂಶದ ಮುಖ್ಯ ಆಧಾರವಾಗಿರಲಿಲ್ಲ.ಆದ್ದರಿಂದ, ಯು.ಪಿ.ಎಸ್.ಸಿ.ಗೆ ಅದನ್ನು ಪೂರೈಸುವ ಅವಕಾಶವಿರಲಿಲ್ಲ.ನ್ಯಾಯಾಧಿಕರಣದ ಆದೇಶದ ಕಂಡಿಕೆಸಂಖ್ಯೆ: 22 ಕ್ಕೆ ಸಂಬಂಧಪಟ್ಟಂತೆಯೂ, ಅದು ಅದನ್ನು ಬಿಂಬಿಸುವುದಿಲ್ಲ.ನಮಗೆ ತಿಳಿದುಬಂದಂತೆ, ಅರ್ಜಿದಾರರ ವಾದಾಂಶಗಳು, ನಿಜವಾಗಿಯೂ ಯು.ಪಿ.ಎಸ್.ಸಿ.ಯ ಅಂಕಗಳ ಮಂಜೂರಾತಿಯಿಂದ ಉದ್ಭವಿಸುತ್ತಿದ್ದು, ಅವರ ಪ್ರಕಾರ ಅದು, ' ಉತ್ಕೃಷ್ಟ ', " ಅತೀ ಉತ್ತಮ ', ' ಉತ್ತಮ ' ಇತ್ಯಾದಿಗಳಿಗೆ ಭಿನ್ನ ಅಂಕಗಳನ್ನು ನೀಡಬೇಕು ಎಂಬ ರಾಜ್ಯ ಸರ್ಕಾರ ಮಾಡಿರುವ

ನಿರ್ದಿಷ್ಟ ವರ್ಗೀಕರಣಗಳಿಗೆ ನಿರ್ದಿಷ್ಟ ಅಂಕಗಳನ್ನು ಮಂಜೂರು ಮಾಡುವ ಮಾರ್ಗದರ್ಶಕ ಸೂತ್ರಗಳಿಗೆ ವಿರುದ್ಧವಾಗಿದೆ.ಆದ್ದರಿಂದ, ಎಲ್ಲಾ ಅಭ್ಯರ್ಥಿಗಳನ್ನು ಒಂದೇ ಪ್ರಮಾಣದ ಗುಣಾರ್ಹತೆಗಳೊಂದಿಗೆ ಸಮಾನೀಕರಿಸಬಾರದು.ನಾವು ಅಂತಹ ವಾದಾಂಶವನ್ನು ನ್ಯಾಯಾಧಿಕರಣದ ಮುಂದಿರಿಸಲಾಗಿರಲೂ ಇಲ್ಲ, ನಿರ್ಣಯಿಸಲಾಗಿಯೂ ಇಲ್ಲ ಎಂಬ ಪರಿಗಣಿತ ಅಭಿಪ್ರಾಯವನ್ನು ಹೊಂದಿದ್ದೇವೆ.ಅದಲ್ಲದೆಯೂ ಸಹ, ನಮ್ಮಿಂದ ಅಂತಹ ವಾದಾಂಶವು ಒಂದೊಮ್ಮೆ ಅಂಗೀಕೃತವಾದರೂ, ಅದು ತಿಮ್ಮಯ್ಯನ ಮೊಕದ್ದಮೆಯ ಚೌಕಟ್ಟಿನಲ್ಲಿ ಬರುತ್ತದೆ.ಅಭ್ಯರ್ಥಿಯ ನಿರ್ದಿಷ್ಟ ವರ್ಗೀಕರಣಕ್ಕೆ ನಿರ್ದಿಷ್ಟ ಅಂಕಗಳ ಮಂಜೂರಾತಿಯ ಪ್ರಶ್ನೆಯು ಸಮಿತಿಯ ಮೇಲೆ ನಿರ್ಬಂಧಿತವಾಗಿರುವುದಿಲ್ಲ. ಶ್ರೇಣೀಕರಣವನ್ನು ರಾಜ್ಯ ಸರ್ಕಾರವೇ ಮಾಡಿದ್ದರೂ ಸಹ, ನ್ಯಾಯಾಧಿಕರಣಕ್ಕೆ ಅಭ್ಯರ್ಥಿಯನ್ನು ವೈಯಕ್ತಿಕವಾಗಿ ಮೌಲೀಕರಿಸುವ ಹಾಗೂ ತದನಂತರ, ಅಂಕಗಳನ್ನು ನೀಡುವ ಕರ್ತವ್ಯ ಮತ್ತು ಜವಾಬ್ದಾರಿಯಿದೆ.

21. ಪ್ರತಿಯೊಬ್ಬ ಅಭ್ಯರ್ಥಿಯ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಗಣಿಸಿದ ಬಳಿಕ, ತಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ಪ್ರತಿಯೊಬ್ಬ ಅಭ್ಯರ್ಥಿಯೂ ಸಮಾನ ಸ್ಥಾನದಲ್ಲಿದ್ದುದರಿಂದ ಅವರು ಎಲ್ಲಾ ಅಭ್ಯರ್ಥಿಗಳನ್ನು ಸಮಾನೀಕರಿಸುವುದು ಸೂಕ್ತವಾಗಿದೆ ಎಂದು ಆಲೋಚಿಸಿರುತ್ತಾರೆ.ಆದ್ದರಿಂದ, ಪ್ರತಿಯೊಬ್ಬ ಅಭ್ಯರ್ಥಿಗೂ ಶೇ .40 ಅಂಕಗಳನ್ನು ನೀಡಲಾಗಿರುತ್ತದೆ.ಸಮಿತಿಯ ವಿರುದ್ಧ ಯಾವುದೇ ದುರುದ್ದೇಶಗಳ ಆಪಾದನೆ ಇಲ್ಲದಿರುವುದರಿಂದ, ಎಲ್ಲಾ ಅಭ್ಯರ್ಥಿಗಳಿಗೆ ಸಮಾನ ಅಂಕಗಳ ತಪ್ಪು ಮಂಜೂರಾತಿಯ ವಾದಾಂಶವನ್ನು, ಅಂಗೀಕರಿಸಲು ಸಾಧ್ಯವಿಲ್ಲ.ಆಯ್ಕೆ ಸಮಿತಿಯು ಮಾಡಿದ ಮೌಲ್ಯಮಾಪನವನ್ನು ಸಮಿತಿಯ ವಿರುದ್ಧ ದುರುದ್ದೇಶಗಳ ಆಪಾದನೆಗಳಿಲ್ಲದ ಹೊರತು ನ್ಯಾಯಿಕ ಅವಲೋಕನಕ್ಕೆ ಒಡ್ಡಲು ಸಾಧ್ಯವಿಲ್ಲ ಎಂದು ಹೇಳುವ ತಿಮ್ಮಯ್ಯನ ಮೊಕದ್ದಮೆಯ ತೀರ್ಪಿನಲ್ಲಿ ಇದನ್ನು ಚೆನ್ನಾಗಿ ನಿರೂಪಿಸಲಾಗಿದೆ.ಒಪ್ಪಿಕೊಳ್ಳಲಾದಂತೆ, ಸದರಿ ಪ್ರಕ್ರಿಯೆಗೆ ಒಳಪಡಿಸಲು ನಾವು ಅವಲಂಬಿಸುವಂಥ ಯಾವುದೇ ದುರುದ್ದೇಶಗಳು ಸಮಿತಿಯ ವಿರುದ್ಧ ಆಪಾದಿತವಾಗಿಲ್ಲ.ಆದ್ದರಿಂದ, ಒಂದೊಮ್ಮೆ ಅಂತಹ ವಾದಾಂಶವನ್ನು ಅಂಗೀಕರಿಸಬೇಕಾದರೂ, ಪ್ರತಿಯೊಬ್ಬ ಅಭ್ಯರ್ಥಿಯನ್ನು ಮರುಮೌಲೀಕರಿಸಲು ಹಾಗೂ ಅಂಕಗಳನ್ನು ನೀಡಲು ಪ್ರತಿಯೊಬ್ಬ ಅಭ್ಯರ್ಥಿಯ ಶ್ರೇಣೀಕರಣವು ಸಮಿತಿಯ ಅಧಿಕಾರ ವ್ಯಾಪ್ತಿಯೊಳಗಿರುತ್ತದೆ.

22. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಒತ್ತಿ ಹೇಳಿದ ಮುಂದಿನ ವಾದಾಂಶವು, ಸಂದರ್ಶನದಲ್ಲಿ ಶೇ. 50 ಅಂಕಗಳನ್ನು ನೀಡಲಾಗಿರುವ ರೀತಿಯ ಕುರಿತು ನ್ಯಾಯಾಧಿಕರಣವೂ ಸಹ ಬಹಳ ಅಸಂತುಷ್ಟವಾಗಿತ್ತು ಎಂಬುದಾಗಿದೆ.ಆದ್ದರಿಂದ ಅವರು ನ್ಯಾಯಾಧಿಕರಣದ ಆದೇಶದ ಕಂಡಿಕೆಸಂಖ್ಯೆ: 49 ನ್ನು ಅವಲಂಬಿಸಿದ್ದಾರೆ.ಅದರಲ್ಲಿ, ನ್ಯಾಯಾಧಿಕರಣವು ಭಾ.ಆ.ಸೇ.ಯ ಪ್ರಮುಖ ನೇಮಕಾತಿಗಳಲ್ಲಿ ನೀಡಲಾಗಿರುವ ಅಂಕಗಳ ಪ್ರಮಾಣಕ್ಕೆ ಸಮವಾಗಿರುವ ಅಂಕಗಳ ಪ್ರಮಾಣವನ್ನು ಸಂದರ್ಶನಕ್ಕೆ ನಿಗದಿಗೊಳಿಸುವುದು ಉತ್ತಮವಾಗಬಹುದು ಎಂಬ ಅಭಿಪ್ರಾಯವನ್ನು ಹೊಂದಿತ್ತು.ಅಂತಹ ಪ್ರಮಾಣವನ್ನು ಮಂಜೂರುಗೊಳಿಸುವುದು ಕಾನೂನು ದೃಷ್ಟಿಯಿಂದ ದೋಷಪೂರ್ಣವಾಗಿದೆ.

23. ನಾವು ನ್ಯಾಯಾಧಿಕರಣದ ಅಭಿಪ್ರಾಯವನ್ನು ಪರಿಗಣಿಸಿರುತ್ತೇವೆ.ಒಟ್ಟಾರೆಯಾಗಿ ನ್ಯಾಯಾಧಿಕರಣವು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಕ್ಕುಳ್ಳದ್ದಾಗಿದೆ ಎಂದು ನಾವು ಹೇಳಬಹುದಾಗಿದೆ.ಆದಾಗ್ಯೂ, ಅವರ ಅಭಿಪ್ರಾಯವು ಅರ್ಜಿದಾರನ ವಾದಾಂಶಗಳನ್ನು ಅಂಗೀಕರಿಸುವುದರಲ್ಲಿ ಹಾಗೂ ತತ್ಪರಿಣಾಮವಾಗಿ

ಆಯ್ಕೆಯನ್ನು ತೆಗೆದುಹಾಕುವುದರಲ್ಲಿ ವ್ಯಕ್ತಗೊಂಡಿಲ್ಲ.ವಾಸ್ತವವಾಗಿ, ನ್ಯಾಯಾಧಿಕರಣವು ಆಯ್ಕೆಯನ್ನು ಎತ್ತಿಹಿಡಿದಿರುತ್ತದೆ.ಅಂತಹ ಒಂದು ಅಭಿಪ್ರಾಯವನ್ನು ಅಂಗೀಕರಿಸುವುದು ಅಥವಾ ಅಂಗೀಕರಿಸದಿರುವುದು ನಮಗೆ ಅವಶ್ಯವಾಗಿರುವುದಿಲ್ಲ.

24. ತರುವಾಯದಲ್ಲಿ ಅರ್ಜಿದಾರನು ಆಯ್ಕೆಯಾಗಿದ್ದು, 2004 ನೇ ವರ್ಷದಲ್ಲಿ ಆತನು ಒಬ್ಬ ಭಾ.ಆ.ಸೇ ಅಧಿಕಾರಿಯಾಗಿ ನೇಮಕಗೊಂಡಿರುತ್ತಾನೆ ಹಾಗೂ ಆದ್ದರಿಂದ, ಸಮಯವನ್ನು ಮರುಸಂಯೋಜಿಸುವ ಪ್ರಶ್ನೆಯು ಅಸಮರ್ಪಕವಾಗಿದೆ ಎಂದು ಪ್ರತಿವಾದಿಸುತ್ತಿರುವ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ನ್ಯಾಯಾಲಯದ ಸಮಕ್ಷಮದಲ್ಲಿ ನಿವೇದಿಸಿದ್ದಾರೆ.ಆದಾಗ್ಯೂ, ಅವರು ತದನಂತರದಲ್ಲಿ ಆಯ್ಕೆಯಾಗಿದ್ದರೂ, ಆಗಿರದಿದ್ದರೂ ಅದು ಇಲ್ಲಿನ ಪ್ರಶ್ನಿತ ಆದೇಶದ ಪರಿಗಣನೆಗೆ ಸಂಬಂಧಿಸಿರುವುದಿಲ್ಲ ಎಂಬ ಅಭಿಪ್ರಾಯವನ್ನು ನಾವು ಹೊಂದಿರುತ್ತೇವೆ.

25. ಈ ಸನ್ನಿವೇಶಗಳ ಹಿನ್ನೆಲೆಯಲ್ಲಿ, ನ್ಯಾಯಾಧಿಕರಣವು ಹೊರಡಿಸಿದ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನಮಗೆ ಯಾವುದೇ ಕಾರಣಗಳು ಕಂಡುಬಂದಿರುವುದಿಲ್ಲ.ನ್ಯಾಯಾಧಿಕರಣದ ಆದೇಶವು ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಆಧರಿಸಿದೆ ಹಾಗೂ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೇಳಿದ ತತ್ವಗಳ ಅನುಸರಣೆಯಲ್ಲಿದೆ.ಯಾವುದೇ ಹಸ್ತಕ್ಷೇಪಕ್ಕೆ ಎಡೆಗೊಡುವಂತಹ ಯಾವುದೇ ದುರುಪಯುಕ್ತತೆಯೂ ನಮಗೆ ಕಂಡುಬಂದಿರುವುದಿಲ್ಲ.ತತ್ಪರಿಣಾಮವಾಗಿ, ಅರ್ಜಿಯ ಗುಣಾರ್ಹತೆಯು ಶೂನ್ಯವಾಗಿದೆಯಾದ್ದರಿಂದ ಅರ್ಜಿಯನ್ನು ವಜಾಗೊಳಿಸಲಾಗಿದೆ.

ಆದೇಶವನ್ನು ವಿಲೆಗೊಳಿಸಲಾಗಿದೆ.